ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು. ದಿ ಃ 31-07-2015 ಒ ಎಸ್ ನಂ ಃ 62/2014 ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ಹೆಚ್ ಎಂ ಎ ಃ ವಕೀಲರಿಂದ ಃ- ಪಿ.ಡಬ್ಲ್ಯೂ. 1.

ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ಎಲ್ಲಾ ಸಂಗತಿಗಳು ಸತ್ಯವಾಗಿದ್ದು ಅವುಗಳನ್ನು ನೋಡಿ ಓದಿ ತಿಳಿದು ಸಹಿ ಮಾಡಿರುತ್ತೇನೆ ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ವಂಶ ವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, 6 ರಿಮ್ಯಾಂಡ್ ರಿಜಿಸ್ಟರ್ ಎಕ್ಸಾಟ್ರಾಕ್ಟ್‌ನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ 2 ರಿಂದ 7 ಎಂದು, ಒಂದು ಕಂದಾಯ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 8 ಎಂದು, ನಾನು ಹೊಲಿಗೆ ತರಬೇತಿ ಪಡೆದಿರುವುದಕ್ಕೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 9 ಎಂದು, ಟೈಲರಿಂಗ್ ಅಂಗಡಿ ನಡೆಸಲು ಲೈಸನ್ಸ್ ಪಡೆದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಅದನ್ನು ನಿಪಿ 10 ಎಂದು, ಪಾಂಡುರಂಗ ರೆಡಿಮೇಡ್ ಗಾರ್ಮೆಂಟ್ಸ್ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 11 ಎಂದು, ದಿ ಃ 14-02-1983 ರ ಒಂದು ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 12 ಎಂದು, ಟೈಲರಿಂಗ್ ಅಂಗಡಿಗೆ ಪಂಚಾಯ್ತಿಯಿಂದ ಲೈಸನ್ಸ್ ಪಡೆದು ಪಂಚಾಯ್ತಿಗೆ ಕಂದಾಯ ಪಾವತಿಸಿದ್ದು ಆ ಬಗ್ಗೆ 4 ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಪಿ 13 ರಿಂದ 16 ಎಂದು, ಶ್ರೀ ರಂಗನಾಥ ಟೈಲರ್ಸ್ ರೆಡಿಮೇಡ್ ಡ್ರೆಸ್ ಮೇಕರ್ಸ್ 2 ಷೇರು ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಪಿ 17 ಮತ್ತು 18 ಎಂದು, ಧಾನ್ಯ ವ್ಯಾಪಾರಿಗಳ ಪತ್ತಿನ ಸಹಕಾರ ಸಂಘ ನಿಯಮಿತದಲ್ಲಿ 1ನೇ ಪ್ರತಿವಾದಿಯು ನನ್ನ ಹೆಸರಿಗೆ ಷೇರು ಹಣ ಪಾವತಿಸಿ ಪಡೆಯಲಾದ ಷೇರು ಹಣದ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 19 ಎಂದು, ಪ್ರತಿವಾದಿಗಳು ಹಾಗೂ ನಮ್ಮ ತಂದೆಯ ಹೆಸರಿಗೆ ಆಸ್ತಿಗಳನ್ನು ಖರೀದಿಸಿದ್ದು ಆ ಬಗ್ಗೆ ದೃಢೀಕೃತ 5 ಕ್ರಯಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಪಿ 20 ರಿಂದ 24 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

( ನಿ ಪಿ 12 ಪ್ರಮಾಣಪತ್ರವನ್ನು ಪ್ರತಿವಾದಿ 1 ರಿಂದ 3 ರವರ ತಕರಾರಿಗೊಳಪಟ್ಟು ಗುರುತಿಸಲಾಯಿತು. )

( ಶ್ರೀ ಸಿ ಜಿ ಎಸ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು)

(ನನ್ನ ಸಮಕ್ಷಮ ತೆ ನ್ಯಾ ಬೆ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಗುಬ್ಬಿ